# ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ

ದೂರವಾಣಿ ಸಂ. 08472-263202 ಫ್ಯಾಕ್ಸ್: 08472-263206, ಇ-ಮೇಲ್: registrargug@rediffmail.com


ಸಂ. ಗುವಿಕ:ವಿಮವಿ:ಸಂಲಗ್ನತೆ:2017-18: 2368 ದಿನಾಂಕ: 19/12/17

ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯ ಗಮನಕ್ಕೆ

ವಿಷಯ: 2017-18ನೇ ಸಾಲಿನಲ್ಲಿ ಶಿಕ್ಷಣ ಮಹಾವಿದ್ಯಾಲಯಗಳ ಮುಂದುವರಿಕೆ ಸಂಲಗ್ನತೆ ಕುರಿತು.

ಉಲ್ಲೇಖ:- 1. ಈ ಕಚೇರಿ ಅಧಿಸೂಚನೆ ಸಂಖ್ಯೆ:ಗುವಿಕ/ವಿಮವಿ/ಸಂಲಗ್ನತೆ/2017-18/154, ದಿನಾಂಕ 27.4.2017.
2. ಕಚೇರಿ ಆದೇಶ ಸಂಖ್ಯೆ ಗುವಿಕ/ವಿಮವಿ/ಸಂಲಗ್ನತೆ/2017-18/2174, ದಿನಾಂಕ 24.11.2017.
3. ವಿದ್ಯಾವಿಷಯಕ ಪರಿಷತ್ ನಿರ್ಣಯ ಸಂಖ್ಯೆ 14, ದಿನಾಂಕ 04.12.2017.
4. ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 28, ದಿನಾಂಕ 07.12.2017.
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 14.12.2017.

--

2017-18ನೇ ಸಾಲಿನ ಶಿಕ್ಷಣ ಮಹಾವಿದ್ಯಾಲಯಗಳ ಮುಂದುವರಿಕೆ ಸಂಲಗ್ನತೆಗೆ ಸಂಬಂಧಿಸಿದಂತೆ, ಈ ಕೆಳಗೆ ನಮೂದಿಸಿದ ಅಂಶಗಳ ಕುರಿತು ಸ್ಪಷ್ಟ ಹಾಗೂ ಸಂಪೂರ್ಣ ಮಾಹಿತಿ ಮತ್ತು ದಾಖಲೆಗಳನ್ನು ಸಲ್ಲಿಸದಿರುವ ಕಾರಣ, 2017-18ನೇ ಸಾಲಿಗಾಗಿ ಶಿಕ್ಷಣ ಮಹಾವಿದ್ಯಾಲಯಗಳ ಮುಂದುವರಿಕೆ ಸಂಲಗ್ನತೆಯ ಅನುಮೋದನೆಯನ್ನು ತಡೆಹಿಡಿಯಲಾಗಿದೆ.

1) **NCTE** ಮಾನ್ಯತೆ ಪಡೆದಿರುವ ದಾಖಲೆ.
2) **NAAC** ಮಾನ್ಯತೆ ಪಡೆದಿರುವ ದಾಖಲೆ.
3) **QCI** ಗೆ ಅಪ್‌ಲೋಡ್ ಮಾಡಿರುವ ದಾಖಲೆ
4) **NCTE** ಮಾರ್ಗದರ್ಶಿ ನಿಯಮಗಳನುಸಾರ
   - ಅ) ಬೋಧಕ/ ಬೋಧಕೇತರ ಸಿಬ್ಬಂದಿಗಳ ಅನುಮೋದಿತ ನೇಮಕಾತಿ ಪಟ್ಟಿ
   - ಬ) ಮಹಾವಿದ್ಯಾಲಯದ ಸ್ವತಂತ್ರ ಮತ್ತು ಪ್ರತ್ಯೇಕ ಕಟ್ಟಡದ ದಾಖಲೆ
   - ಕ) ಅವಶ್ಯಕ ಸೌಲಭ್ಯಗಳು-ತರಗತಿ ಕೋಣೆಗಳು, ಪ್ರಯೋಗಾಲಯ ಹಾಗೂ ಗ್ರಂಥಾಲಯ

ಈ ನಿಟ್ಟಿನಲ್ಲಿ ಮಾನ್ಯ ಕುಲಪತಿಗಳ ನಿರ್ದೇಶನ ಹಾಗೂ ಸಿಂಡಿಕೇಟ ಸಭೆಯ ನಿರ್ಣಯದಂತೆ, ಎಲ್ಲಾ ಮಹಾವಿದ್ಯಾಲಯಗಳು ಮೇಲೆ ತಿಳಿಸಿರುವ ಅಂಶಗಳಿಗನುಗುಣವಾಗಿ ಸಂಪೂರ್ಣ ಸಿದ್ಧತೆಯನ್ನು ಮಾಡಿಕೊಂಡು ವಿಶ್ವವಿದ್ಯಾಲಯದ ಕಾರ್ಯಾಲಯಕ್ಕೆ ದಿನಾಂಕ **25.01.2018** ರೊಳಗಾಗಿ ಮುಂದಿನ ಅಗತ್ಯ ಕ್ರಮಕ್ಕಾಗಿ ಸಲ್ಲಿಸಲು ಸೂಚಿಸಲಾಗಿದೆ. ನಿಗದಿತ ಅವಧಿಯೊಳಗೆ ದಾಖಲೆಗಳನ್ನು ಸಲ್ಲಿಸದಿರುವ ಶಿಕ್ಷಣ ಮಹಾವಿದ್ಯಾಲಯಗಳನ್ನು ಸಂಲಗ್ನತೆ ಮುಂದುವರಿಕೆ ಅನುಮೋದನೆ ಪ್ರಕ್ರಿಯೆಗೆ ಪರಿಗಣಿಸಲಾಗುವುದಿಲ್ಲ. ಮುಂದುವರೆದು, ಸದರಿ ಸಂಲಗ್ನತೆ ಪ್ರಕ್ರಿಯೆ ಸಂಪೂರ್ಣಗೊಳ್ಳುವವರೆಗೆ, ಯಾವುದೇ ಮಹಾವಿದ್ಯಾಲಯಗಳು 2017-18ನೇ ಸಾಲಿಗಾಗಿ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ ಕೈಗೊಳ್ಳಬಾರದು. ಒಂದು ವೇಳೆ ಪ್ರವೇಶ ಪ್ರಕ್ರಿಯೆ ಕೈಗೊಂಡರೆ ಆಯಾ ಮಹಾವಿದ್ಯಾಲಯಗಳು ನೇರವಾಗಿ ಹೊಣೆಗಾರರಾಗಿರುತ್ತಾರೆ.

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,
ಪ್ರಾಂಶುಪಾಲರು,

______________________
______________________
______________________

ಪ್ರತಿಗಳು:

1. ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಜ್ಯೂನಿಯರ್ ಕಾಲೇಜು ಆವರಣ, ಕೆ.ಜಿ. ರಸ್ತೆ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಡೀನರು, ಶಿಕ್ಷಣ ನಿಕಾಯ, ಗು.ವಿ. ಕಲಬುರಗಿ ರವರ ಮಾಹಿತಿಗಾಗಿ.
3. ಮುಖ್ಯಸ್ಥರು, ಶಿಕ್ಷಣ ವಿಭಾಗ, ಗು.ವಿ. ಕಲಬುರಗಿ ರವರ ಮಾಹಿತಿಗಾಗಿ.
4. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರ ಮಾಹಿತಿಗಾಗಿ
5) [illegible]